


# ಎವರೆಸ್ಟ್‌ನಲ್ಲಿ ದಿವ್ಯಾ ವಿಜಯೋತ್ಸವ

■ ರಾಘು

ವಿಶ್ವದ ಕ್ರೀಡಾಂಗಣದಲ್ಲಿ ಭಾರತೀಯ ಹುಡುಗಿಯರು ಮಿಂಚುತ್ತಿದ್ದಾರೆ. ಇತ್ತೀಚೆಗೆ ಉತ್ತರ ಪ್ರದೇಶದ ದಿವ್ಯಾ ಸಿಂಗ್ ಸಾಹಸ ಮೆರೆದು ಎವೆರೆಸ್ಟ್ ಇತಿಹಾಸದಲ್ಲಿ ಅವಿಸ್ಮರಣೀಯ ಸಾಧನೆ ಮಾಡಿದ್ದರು.

ಉತ್ತರ ಪ್ರದೇಶದ ದಿವ್ಯಾ ಸಿಂಗ್ 14 ದಿನಗಳ ಸೈಕಲ್ ಯಾನದ ಮೂಲಕ ಎವರೆಸ್ಟ್ ಬೇಸ್ ಕ್ಯಾಂಪ್ (Everest base camp) ಮುಟ್ಟಿದ ಮೊದಲ ಭಾರತೀಯ ಮಹಿಳೆ ಎಂಬ ಹಿರಿಮೆಯನ್ನು ಗಳಿಸಿದ್ದಾರೆ. ವಿಶ್ವದಲ್ಲಿ ಎರಡನೇ ಮಹಿಳೆ ಎನ್ನುವ ಕೀರ್ತಿಗೂ ಇವರು ಪಾತ್ರರಾಗಿದ್ದಾರೆ. ಪ್ರತಿಕ್ಷಣವೂ ಹವಾಮಾನ ವೈಪರೀತ್ಯದ ಸವಾಲನ್ನು ಎದುರಿಸಿ –12 ಡಿಗ್ರಿ ಮೈನಡುಗಿಸುವ ಚಳಿಯಲ್ಲಿ ಸೈಕಲ್ ತುಳಿದು ಸಾಧನೆಯ ಶಿಖರವನ್ನು ಏರಿದ್ದಾರೆ.

ವೃತ್ತಿಯಿಂದ ಶಿಕ್ಷಕಿಯಾಗಿರುವ ದಿವ್ಯಾ ಸಿಂಗ್ ಗೋರಖ್‌ಪುರದ ಬನೌರಾ ಗ್ರಾಮದ ನಿವಾಸಿ. 28 ವರ್ಷದ ಆಕೆ ಮಾರ್ಚ್ 16ರಂದು ಕಠ್ಮಂಡುವಿನಿಂದ ತಮ್ಮ ಪ್ರಯಾಣವನ್ನು ಆರಂಭಿಸಿದರು. ಬಾಲ್ಯದ ದಿನಗಳಿಂದಲೂ ಕ್ರಿಯಾಶೀಲರಾಗಿದ್ದ ಅವರು ಸಾಹಸ ಮೆರೆಯುವ ಆಸಕ್ತಿಯನ್ನು ಹೊಂದಿದ್ದರು. ಮೌಂಟ್ ಎವರೆಸ್ಟ್ ಅತ್ತ ತಮ್ಮ ಚಿತ್ತವನ್ನು ಹರಿಸಿದ ಅವರು ಸೈಕಲ್ ಏರಿ 17560 ಅಡಿ ಎತ್ತರದ ಎವರೆಸ್ಟ್ ಬೇಸ್ ಕ್ಯಾಂಪ್ ಮೇಲೆ ಕಾಲೂರಲು ಅಣಿಯಾದರು. ಟ್ರೆಕ್ಕಿಂಗ್ ಪಥದಲ್ಲಿ ಸೈಕಲ್ ತುಳಿದು ರಾಷ್ಟ್ರೀಯ ಧ್ವಜವನ್ನು ಪ್ರದರ್ಶಿಸಿ ತಮ್ಮ ಸಂಕಲ್ಪದ ಕಿರೀಟಕ್ಕೆ ತುರಾಯಿ ಮುಡಿಸಿದ್ದಾರೆ. ಎರಡು ವಾರಗಳ ಅವರ ಯಾನದಲ್ಲಿ ನಿತ್ಯವೂ 10ರಿಂದ 12 ಗಂಟೆ ಸೈಕಲ್ ತುಳಿದಿದ್ದಾರೆ.

ಕುತೂಹಲದ ನೋಟವನ್ನು ಹಿಮಪರ್ವತದತ್ತ ನೆಟ್ಟ ದಿವ್ಯಾ ಕಠಿಣ ಪಥವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಚಾರಣ ಮಾರ್ಗದಲ್ಲಿ ಸೈಕಲ್ ಓಡಿಸುವುದು ಸುಲಭದ ಮಾತಾಗಿರಲಿಲ್ಲ. ಎವರೆಸ್ಟ್ ಬೇಸ್ ಕ್ಯಾಂಪ್‌ಗೆ ಚಾರಣ ಹೋಗುವುದು ಸಾಮಾನ್ಯ. ಅಂತಹ ಹಾದಿಯಲ್ಲಿ ಸೈಕಲ್ ತುಳಿಯುತ್ತೇನೆ ಎಂದು ಯೋಚಿಸುವುದೇ ಸಾಹಸ. ತಮ್ಮ ವೈಯಕ್ತಿಕ ಆಸಕ್ತಿಯಿಂದ ಆ ಹಾದಿಯನ್ನೇ ಆಯ್ಕೆ ಮಾಡಿಕೊಂಡ ಅವರು ಗುರಿ ಸಾಧಿಸುವ ಮೂಲಕ ಕ್ರೀಡಾ ಸ್ಫೂರ್ತಿಗೆ ಮಾದರಿಯಾಗಿದ್ದಾರೆ.

ತಮ್ಮ ಪ್ರಯಾಸವನ್ನು ಲೆಕ್ಕಿಸದೆ ಅಪಾರ ಪರಿಶ್ರಮದಿಂದ ಎವರೆಸ್ಟ್ ಕ್ಯಾಂಪ್ ಮೇಲೆ ಸೈಕಲ್ ನಿಲ್ಲಿಸಿ ನಿಟ್ಟುಸಿರು ಬಿಟ್ಟರು. ಆ ಕ್ಷಣವೇ ಅವರು ಖುಷಿಯಲ್ಲಿ ತಮ್ಮನ್ನು ಹೊತ್ತು ಸಾಗಿದ ಸೈಕಲನ್ನೇ ಎತ್ತಿ ಹಿಡಿದು ತಮ್ಮ 'ಬಾಹುಬಲ'ದ ಪ್ರದರ್ಶನಕ್ಕೆ ಪೋಸು ಕೊಟ್ಟಿದ್ದಾರೆ. ಸಮುದ್ರ ಮಟ್ಟದಿಂದ 5364 ಮೀಟರ್ ಎತ್ತರದ ಎವರೆಸ್ಟ್ ಬೇಸ್ ಕಡಿದಾದ ಕಲ್ಲು ಮಂಜಿನ ಹಾದಿ. ಅದನ್ನು ಸವೆಸುವುದು ಸುಲಭವಾಗಿರಲಿಲ್ಲ. ಸೈಕಲ್ ತಳ್ಳಲೂ ಸ್ಥಳಾವಕಾಶ ಇಲ್ಲದ ಸಂದರ್ಭದಲ್ಲಿ ಅದನ್ನು ಹೊತ್ತು ಮುಂದಕ್ಕೆ ಅಡಿ ಇಡುವ ಕ್ಷಣದಲ್ಲೂ ಅವರು ಉಲ್ಲಾಸದ ನಗುವನ್ನೇ ಬೀರಿದ್ದಾರೆ.

ಸೈಕಲ್ ಸಾಥಿಯ ದಿವ್ಯಾ ನೇಪಾಳದ ಕಠ್ಮಂಡುವಿನಿಂದ ಎವರೆಸ್ಟ್ ಬೇಸ್ ಕ್ಯಾಂಪ್‌ಗೆ ಸೈಕಲ್‌ನಲ್ಲಿ ಪ್ರಯಾಣಿಸಿದ ಮೊದಲ ಭಾರತೀಯ ಮಹಿಳೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದರೆ. ಭೀಕರ ಚಳಿಯ ವಾತಾವರಣದಲ್ಲಿ ಆಮ್ಲಜನಕದ ಕೊರತೆಯಂತಹ ಪ್ರಾಕೃತಿಕ ಸವಾಲನ್ನು ಸಮರ್ಥವಾಗಿ ಎದುರಿಸಿದ್ದಾರೆ. 'ಎವರೆಸ್ಟ್ ಬೇಸ್ ಕ್ಯಾಂಪ್' ಜಗತ್ತಿನ ಅತ್ಯಂತ ಪ್ರಸಿದ್ಧ ಟ್ರೆಕ್ಕಿಂಗ್ ಪಥ. ಸಾಹಸ ಮೆರೆಯುವ ಚಾರಣಿಗರಿಗೆ ಅದನ್ನೇರುವುದು ಹೆಮ್ಮೆಯ ಸಂಗತಿ. ಇದು ಸಮುದ್ರ ಮಟ್ಟದಿಂದ 5364 ಮೀಟರ್ ಎತ್ತರದಲ್ಲಿದೆ. ಈ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವ ಚಾರಣಿಗರು ಸಾಮಾನ್ಯವಾಗಿ ನೇಪಾಳದ ಲುಕ್ಲಾ ವಿಮಾನ ನಿಲ್ದಾಣದಿಂದಲೇ ತಮ್ಮ ನಡಿಗೆಯನ್ನು ಆರಂಭಿಸುತ್ತಾರೆ. ಟ್ರೆಕ್ಕಿಂಗ್‌ಗೆ 12ರಿಂದ 15 ದಿನಗಳನ್ನು ತೆಗೆದುಕೊಳ್ಳುತ್ತಾರೆ. ಮಾರ್ಚ್ ತಿಂಗಳಿನಿಂದ ಮೇ ತಿಂಗಳ ಅವಧಿ ಚಾರಣಕ್ಕೆ ಹಿತವಾದ ವಾತಾವರಣ ಇರುತ್ತದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65